ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1ನೇ ಎದುರುದಾರರ ಪರ ವಕೀಲರಿಂದಃ-

ನಾನು ಬೆಂಗಳೂರಿನಲ್ಲಿ ವಾಸ ಮಾಡಿಕೊಂಡಿರುತ್ತೇನೆ. ನನ್ನ ವಾಹನಕ್ಕೆ ಐಸಿಐಸಿ ವಿಮಾ ಕಂಪನಿಯಿಂದ ವಿಮೆ ಮಾಡಿಸಲಾಗಿದೆ. ಅಪಘಾತವು ಕೆಎಸ್ಆರ್ ಟಿ ಸಿ ಬಸ್ ಮತ್ತ ಬುಲೆಟ್ ನಡುವೆ ಆಗಿರುತ್ತದೆ. ನಾನು ಬಾರಿನಲ್ಲಿ ಕೀ ಇಟ್ಟಿದ್ದೆ ಅನಿಲ್ ಕುಮಾರ್ ರವರು ಬುಲೆಟ್ ತೆಗೆದುಕೊಂಡಿರುತ್ತಾರೆ. ನಾನೇ ಬಾರಿನ ಮಾಲೀಕರಾಗಿರುತ್ತಾರೆ. ಲೇಬರ್ ಕಛೇರಿಯಿಂದ ಮೃತ ವ್ಯಕ್ತಿಯ ಬಗ್ಗೆ ನಾನು ಮಾಹಿತಿ ಪಡೆದುಕೊಂಡಿಲ್ಲ. ಅವರಿಗೆ ಸಂಬಳ ಕೊಡುತ್ತಿದ್ದ ಬಗ್ಗೆ ಲೆಡ್ಜರ್ ಹಾಜರುಪಡಿಸಿಲ್ಲ. ಮೃತ ವ್ಯಕ್ತಿ ನನ್ನ ಬಳಿ ಕೆಲಸ ಮಾಡುತ್ತಿರಲಿಲ್ಲ ಪರಿಹಾರ ಪಡೆಯಲು ಅನುಕೂಲವಾಗಲೀ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ವ್ಯಕ್ತಿಯ ಬಳಿ ಡಿ.ಎಲ್ ಇತ್ತು ಅದನ್ನು ಹಾಜರುಪಡಿಸಿರುತ್ತಾರೆ. ಮೃತ ವ್ಯಕ್ತಿಯು ಆ ದಿನ ಡಿ.ಎಲ್ ಇಲ್ಲದೇ ಹೆಲ್ಮಟ್ ಧರಿಸಿದೆ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನನ್ನು ಪೊಲೀಸರು ವಿಚಾರಣೆ ಮಾಡಿಲ್ಲ ನಾನೇ ಹೋಗಿ ಹೇಳಿಕೆ ಕೊಟ್ಟಿಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ. ನನ್ನ ವಾಹನದ ಆರ್.ಸಿ ಮತ್ತು ವಿಮೆ ಪಾಲಿಸಿ ಹಾಜರುಪಡಿಸಿರುತ್ತೇನೆ. ಅಪಘಾತ ಮೃತ ಪಟ್ಟಿರುವ ವ್ಯಕ್ತಿಯ ತಪ್ಪಿನಿಂದ ಆಗಿದ್ದರೂ ಸಹ ಪೊಲೀಸರ ಜೊತೆ ಶಾಮಿಲ್ ಕೆ.ಎಸ್.ಆರ್.ಟಿ.ಸಿ. ಬಸ್ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಹಣ ಕೊಡಲು ನಾನು ಸಹ ಬಾದ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ. ಪಿಡಬ್ಲ್ಯೂ -1 ರವರ ಅಡ್ಡ ವಿಚಾರಣೆ ಮಾಡುವಾಗ ನಾನು ನ್ಯಾಯಾಲಯದಲ್ಲೆ ಹಾಜರಿದ್ದೆ ಎಂದರೆ ಸರಿ.

ಪಾಟೀ ಸವಾಲು ಅರ್ಜಿದಾರರು ಪರ ವಕೀಲರಿಂದಃ-

ನಮ್ಮ ಬಾರಿನ ಹೆಸರು ಪಬ್ ಹೌಸ್. ಮೊದಲಿಗೆ 7 ಸ್ಟಾರ್ ಎಂದು ಇತ್ತು ಈಗ ಪಬ್ ಹೌಸ್ ಎಂದು ಕರೆಯುತ್ತೇವೆ. ನಮ್ಮ ಪಬ್ ಹೌಸ್ ನಲ್ಲಿ ಕೆಲಸ ಮಾಡುವವರ ಪಟ್ಟಿಯನ್ನು ಅಬಕಾರಿ ನೀರಿಕ್ಷರಿಗೆ ಮಾಹಿತಿ ಕೊಟ್ಟಿರುತ್ತೇನೆ. ಸಾಕ್ಷಿಯು ಗುರುತಿಸಿದ ಪಟ್ಟಿಯನ್ನು ನಿಪಿ-16 ಎಂದು ಗುರುತಿಸಲಾಯಿತು.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.